ಸಿವಿಲ್ ಜಡ್ಜ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಸಿಂದಗಿ

ಕ್ರಿಮಿನಲ್ ಕೇಸ್ ನಂ.743/2019

ಸಿ.ಡಬ್ಲ್ಯೂ:2 ಪಿ.ಡಬ್ಲ್ಯೂ:1

ಸಾಕ್ಷಿಗೆ ದಿನಾಂಕ :16/06/2023 ರಂದು ಪ್ರಮಾಣಿಕರಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು | ಭೀಮರಾವ |
| ತಂ/ಗಂ. ಹೆಸರು | ಅಂಬಾಜಿ ಕಾಂಬ್ಳೆ |
| ವಯಸ್ಸು | 59 ವರ್ಷ |
| ಉದ್ಯೋಗ | ವ್ಯಾಪಾರ |
| ವಾಸಸ್ಥಳ | ಸಿಂದಗಿ |

ಮುಖ್ಯ ವಿಚಾರಣೆ : ಶ್ರೀ ಎಪಿಪಿ ಯವರಿಂದ

ದಿನಾಂಕ 30-07-2019 ರಂದು ನಾನು ಸಿಂದಗಿ ಸರ್ಕಾರಿ ಆಸ್ಪತ್ರೆ ಮುಂದೆ ನಿಂತಾಗ ಪೋಲಿಸರು ನನ್ನನ್ನು ಕರೆದುಕೊಂಡು ಶವಗಾರಕ್ಕೆ ಕರೆದುಕೊಂಡು ಹೋದರು ಅಲ್ಲಿ ನನ್ನ ಜೊತೆ ಚಾಸಾ 4 ಮತ್ತು ಇತರರು ಇದ್ದರು ಅಲ್ಲಿ ಶವ ಇತ್ತು. ಶವ ಅದು ಮೃತ ಮಾರುತಿಗೆ ಸಂಬಂಧಿಸಿದ್ದು ಇತ್ತು. ಅಲ್ಲಿ ಶವ ಪಂಚನಾಮೆ ಮಾಡಿ ಭಾವ ಚಿತ್ರ ತೆಗೆದಿರುತ್ತಾರೆ. ನಂತರ ನಮ್ಮನ್ನು ಘಟನೆ ನಡೆದ ಸ್ಥಳಕ್ಕೆ ಕರೆದುಕೊಂಡು ಹೋಗಿರುತ್ತಾರೆ. ಅಲ್ಲಿ ಸ್ಥಳಕ್ಕೆ ಹೋಗಿ ಘಟನೆಯ ಕುರಿತು ಅಳತೆ ಮಾಡಿ ನಕ್ಷೆ ತಯಾರಿಸಿದರು ನಂತರ ನಮ್ಮನ್ನು ಅಲ್ಲಿಂದ ಪೋಲಿಸ್ ಠಾಣೆಗೆ ಕರೆದುಕೊಂಡು ಹೋಗಿರುತ್ತಾರೆ. ಠಾಣೆಯಲ್ಲಿ ಕರೆದುಕೊಂಡು ಹೋಗಾಗ ಅಲ್ಲಿ ಒಂದು ಟಾಟಾ ಎಸಿ ಒಂದು ಮೋಟಾರ್ ಸೈಕಲ ಇತ್ತು. ನಂತರ ಪೋಲಿಸರು ಪಂಚನಾಮೆ ಮಾಡಿರುತ್ತಾರೆ. ಪಂಚನಾಮೆ ಮಾಡಿ ಗಾಡಿಗಳನ್ನು ಪೋಲಿಸರು ತಮ್ಮ ತಾಬಾಕ್ಕೆ ಇಟ್ಟುಕೊಂಡಿರುತ್ತಾರೆ. ಘಟನಾ ಸ್ಥಳದಲ್ಲಿ ನಮ್ಮನ್ನು ನಿಲ್ಲಿಸಿ ಭಾವ ಚಿತ್ರ ತಗೆದಿರುತ್ತಾರೆ. ಈಗ ನನಗೆ ಇನ್ಕೆಸ್ಟ ಪಂಚನಾಮೆ ತೋರಿಸಲಾಗಿ ಅದನ್ನು ನೋಡಿ ಗುರುತಿಸಿದ್ದರಿಂದ ನಿಪಿ 1 ಎಂದು ಗುರುತಿಸಲಾಯಿತು. ಅದರ ಮೇಲೆ ಇರುವ ಸಹಿ ನಿಪಿ 1 ಎ ಎಂದು ಗುರುತಿಸಲಾಯಿತು. ಇನ್ಕೇಷ ಜಾಗದಲ್ಲಿ ತೆಗೆದ ಭಾವ ಚಿತ್ರ ನೋಡಿ ಗುರುತಿಸಿದ್ದು ಅದನ್ನು ನಿಪಿ 2 ಎಂದು ಗುರುತಿಸಲಾಯಿತು. ಸ್ಥಳ ಪಂಚನಾಮೆ ನಿಪಿ 3 ಎಂದು ಗುರುತಿಸಲಾಯಿತು. ಅದರ ಮೇಲೆ ಇರುವ ಸಹಿ ನಿಪಿ 3 ಎ ಎಂದು ಗುರುತಿಸಲಾಯಿತು. ಕಚ್ಚಾ ನಕಾಶೆ ನೋಡಿ ಗುರುತಿಸಿದ್ದು ಅದನ್ನು ನಿಪಿ. 4 ಎಂದು ಗುರುತಿಸಲಾಯಿತು. ಈಗ ಘಟನಾ ಸ್ಥಳದಲ್ಲಿ ತೆಗೆದ ಭಾವ ಚಿತ್ರ ನೋಡಿ ಗುರುತಿಸಿದ್ದು ಅದನ್ನು ನಿಪಿ 5 ಎಂದು ಗುರುತಿಸಲಾಯಿತು.

ವಾಹನ ಜಪ್ತು ಪಂಚನಾಮೆ ನೋಡಿ ಗುರುತಿಸಿದ್ದು ಅದನ್ನು ನಿಪಿ 6 ಎಂದು ಗುರುತಿಸಲಾಯಿತು. ಅದರ ಮೇಲೆ ಇರುವ ಸಹಿ ನಿಪಿ 6 ಎ ಎಂದು ಗುರುತಿಸಲಾಯಿತು. ವಾಹನಗಳ ಎರಡು ಭಾವ ಚಿತ್ರಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ. 7 ಮತ್ತು 8 ಎಂದು ಗುರುತಿಸಲಾಯಿತು. 4-5 ವರ್ಷಗಳಾಗಿರುವುದರಿಂದ ನಿಖರವಾಗಿ ಯಾವ ಯಾವ ಸಮಯಕ್ಕೆ ಪಂಚನಾಮೆ ಮಾಡಿರುತ್ತಾರೆ ಎಂದು

ಹೇಳಲು ಬರುವುದಿಲ್ಲ.



( ಈ ಹಂತದಲ್ಲಿ ಸ.ಸ.ಅ ರವರು ಸಾಕ್ಷಿಯನ್ನು ಭಾಗಶ ಪ್ರತಿಕೂಲಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅದಕ್ಕೆ ಆರೋಪಿ ಪರ ವಕೀಲರು ಯಾವುದೇ ತಕರಾರು ವ್ಯಕ್ತಪಡಿಸದ ಕಾರಣ ಮತ್ತು ಸಾಕ್ಷಿಯು ಪ್ರತ್ಯೇಕ್ಷ ಸಾಕ್ಷಿಯಾಗಿದ್ದು ಸಂಪೂರ್ಣವಾಗಿ ಪ್ರತಿಕೂಲವಾಗಿ ಸಾಕ್ಷ್ಯ ನುಡಿದಿದ್ದರಿಂದ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)

<u>ಪಾಟೀ ಸವಾಲು : ಎ.ಪಿ.ಪಿ. ಯವರಿಂದ</u>

ದಿನಾಂಕ 30-07-2019 ರಂದು ನನ್ನೊಂದಿಗೆ ಚಾ ಸಾ 2 ರವರು ಕೂಡಾ ಪಂಚನಾಮೆ ಮಾಡುವ ಸಮಯದಲ್ಲಿ ಹಾಜರಿದ್ದ ಎಂದರೆ ನಿಜ. ಪಂಚನಾಮೆಯನ್ನು ಮದ್ಯಾಹ್ನ 3 ರಿಂದ 4 ಗಂಟೆಯವರೆಗ ಮಾಡಿರುತ್ತಾರೆ. ಮೋಟಾರ್ ಸೈಕಲ್ ನಂಬರ ಎಮ್ ಎಚ್ 07/ಬಿ/0595 ಅಂತಾ ಇದೆ ಎಂದರೆ ನಿಜ ನೆನಪಿಲ್ಲ. ಟಾಟಾ ಕೆಎ/28/ಎ/7348 ಅಂತಾ ಇದೆ ಎಂದರೆ ನಿಜ.

**ಪಾಟೀ ಸವಾಲು ಶ್ರೀಮತಿ ಆರ್ ಎಮ್ ಶಿ ವಕೀಲರಿಂದ**

ನಾನು ಸಿಂದಗಿ ಗ್ರಾಮದವನು. ನಾನು ಸಿಂದಗಿ ನಗರದಲ್ಲಿ ಬಾಂಡೆ ವ್ಯಾಪಾರ ಮಾಡುತ್ತೇನೆ. ಮೃತ ಮಾರುತಿ ನಮ್ಮ ಜಾತಿಯವರು ಕಾರಣ ಹೋಗಿದ್ದೆ. ನನ್ನ ಮನೆ ನ್ಯಾಯಾಲಯಗಳ ಹಿಂದೆ ಇದೆ. ಚಾ ಸಾ 2 ಮತ್ತು 4 ರವರು ನನ್ನನ್ನು ಕರೆದಿರುತ್ತಾರೆ. ಆಗ ಸಮಯ 4 ಗಂಟೆ ಆಗಿತ್ತು. ಅವರು ಕರೆದಾಗ ನಾನು ಮನೆಯಲ್ಲಿದ್ದೆ. ಪೋಲಿಸರು ಯಾವ ದಾಖಲೆ ಮೇಲೆ ನನ್ನ ಸಹಿ ಪಡೆದರು ಎಂದು ಹೇಳಲು ಬರುವುದಿಲ್ಲ. ನಾನು ಒಂದೆ ಸಹಿ ಮಾಡಿರುತ್ತೇನೆ. ನಾನು ದೇವರ ಹಿಪ್ಪರಗಿ ಕಡೆ ಹೋಗಿಲ್ಲ. ಆದರೆ ಪಂಚನಾಮೆಗೋಸ್ಕರ ಪೋಲಿಸ್ ಠಾಣೆಗೆ ಮತ್ತು ವಾಹನ ತರಲು ಹೋಗಿದ್ದೇವು. ದೇವರ ಹಿಪ್ಪರಗಿಗೆ ಸಂಜೆ 4 ಗಂಟೆಗೆ ಹೊಗಿರುತ್ತೇವೆ. ಪೋಲಿಸ್ ಠಾಣೆಯಿಂದ ಚಾ ಸಾ 4 ಇತನ ವಾಹನ ತರಲು ಹೋಗಿದ್ದೆ. ಆದರೆ ಅವರು ವಾಹನ ಬಿಟ್ಟಿರುವುದಿಲ್ಲ. ನಾನು ದೇವರ ಹಿಪ್ಪರಗಿಯಲ್ಲಿ ಏನು ನೋಡಿಲ್ಲ. ಸದರಿ ವಾಹನ ಪೋಲಿಸ್ ಠಾಣೆಯಲ್ಲಿತ್ತು. ನಾನು ಪೋಲಿಸ್ ಠಾಣೆಗೆ ಹೋಗಿದ್ದೆ. ನಾನು ಗುನ್ನಾ ಜಾಗೆ ಸ್ಥಳಕ್ಕೆ ಹೋಗಿಲ್ಲ. ಮೊದಲು ನಾನು ಸರ್ಕಾರಿ ಆಸ್ಪತ್ರೆಗೆ ಹೋಗಿರುತ್ತೇನೆ. ಅಲ್ಲಿ ಸುಮಾರು ಜನರು ಇದ್ದರು.

ನನ್ನ ಸಮಕ್ಷಮ ಶವ ಪಂಚನಾಮೆ ಮಾಡಿಲ್ಲ ಎಂದರೆ ಸರಿಯಲ್ಲ. ಸದರಿ ನನ್ನ ಸಹಿ ತೆಗೆದುಕೊಂಡ ದಾಖಲೆ ಮೇಲೆ ಏನು ಬರೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನನ್ನ ಸಮಕ್ಷಮದಲ್ಲಿ ಯಾವುದೇ ವಾಹನವಾಗಲಿ ಅಥವಾ ಸ್ಥಳ ಪಂಚನಾಮೆ ಮತ್ತು ಶವ ಪಂಚನಾಮೆ ಮಾಡಿಲ್ಲ ಎಂದರೆ ನಿಜ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ವಿಷಯ ಸುಳ್ಳಿನಿಂದ ಕೂಡಿದೆ ಎಂದರೆ ಸರಿಯಲ್ಲ. ಮೃತನ ವ್ಯಕ್ತಿ ಕುಟುಂಬದಸ್ಥರು ನನಗೆ ಒಂದೇ ಕುಲದವರು ಇರುವ ಕಾರಣ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ

ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮೃತ ಮಾರುತಿಯ ಸಂಬಂಧಿಕರು ವಿಮೆ ಪರಿಹಾರ ಕೋರಿ ಅರ್ಜಿ ಸಲ್ಲಿಸಿರುತ್ತಾರೆ ಅದರ ಕುರಿತು ನನಗೆ ಮಾಹಿತಿ ಇಲ್ಲ.



ಸಿ.ಡಬ್ಲ್ಯೂ:2 ಪಿ.ಡಬ್ಲ್ಯೂ:1

ಮರು ವಿಚಾರಣೆ : ಇಲ್ಲಾ

(ಸಾಕ್ಷಿಯ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಅದೆ.

ಸಿವಿಲ್ ಜಡ್ಜ ಮತ್ತು ಜೆ.ಎಂ.ಎಫ್.ಸಿ.,
ಸಿಂದಗಿ